A.C. No.01/2023

ಪಿ.ಡಬ್ಲ್ಯೂ.1

ದಿನಾಂಕಃ 20-03-2024
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರದೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ ಃ

ಪಿ. ಶೇಷಾರೇಡ್ಡಿ ಇವರು 1995 ರಲ್ಲಿ ಮರಣ ಹೊಂದಿರುತ್ತಾರೆ. ಆದರೆ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಪಿ. ಶೇಷಾರೇಡ್ಡಿ ಇವರ ಮರಣ ಪ್ರಮಾಣ ಪತ್ರವನ್ನು ಈ ಪ್ರರಕಣದಲ್ಲಿ ಹಾಜರುಪಡಿಸಿರುವುದಿಲ್ಲ. ಶೇಷಾರೆಡ್ಡಿ ಇವರು ನನಗೆ GPA ನ್ನು 1982 ರಲ್ಲಿ ಬರೆದುಕೊಟ್ಟಿರುತ್ತಾರೆ. ಸದರಿ GPA ಪತ್ರ ಈ ಪ್ರಕಣದಲ್ಲಿ ಒಳಗೊಂಡಿರುವ ಕಾಮಗಾರಿಗೆ ಸಂಬಂದಪಟ್ಟಂತೆ ಬರೆದುಕೊಡಲಾಗಿತ್ತು. 1982 ರಂದು ಬರೆದುಕೊಟ್ಟಪಿರುವ GPA ಪತ್ರ ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ GPA ಪತ್ರದಲ್ಲಿ ಪ್ರಕರಣವನ್ನು ದಾಖಲು ಮಾಡಲು ನನಗೆ ಅಧಿಕಾರ ನೀಡಲಾಗಿದೆ. ಮೂಲ GPA ಪತ್ರ ನಾನು ಕಳೆದುಕೊಂಡಿರುತ್ತೇನೆ ನಂತರದಲ್ಲಿ ನಿಪಿ.5 ದ್ವಿಪ್ರತಿ ಪಡೆದುಕೊಂಡಿರುತ್ತೇನೆ. ನಿಪಿ.5 ಅಥವಾ ಅದರ ಮೂಲ ಪ್ರತಿಯಲ್ಲಿ ಪಿ. ಶೇಷಾರೇಡ್ಡಿ ಇವರು Arbitrator ನ್ನು ನೇಮಕ ಮಾಡಲು ಅರ್ಜಿಹಿ ಅಥವಾ ದಾವೆ ಸಲ್ಲಿಸಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿ. ಪ್ರಸಕ್ತ ಅರ್ಜಿಯನ್ನು ನಾನೇ ಸಲ್ಲಿರುತ್ತೇನೆ ಎಂದರೆ ಸರಿ. ಪ್ರಸಕ್ತ ಅರ್ಜಿಯನ್ನು ಪಿ. ಶೇಷಾರೇಡ್ಡಿ ಇವರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಪ್ರಸಕ್ತ ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ಮತ್ತು ಅರ್ಜಿಯನ್ನು ಡ್ರಾಪ್ಟ್ ಮಾಡಲು ಕಾಲಕ್ಕೆ ಪಿ. ಶೇಷಾರೇಡ್ಡಿ ಇವರು ಹಾಜರಿದ್ದರು. ಸದರಿ ಅರ್ಜಿಯನ್ನು Draft ಮಾಡಲು ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ಪಿ. ಶೇಷಾರೇಡ್ಡಿ ಇವರು ಮಾಹಿತಿ ಕೊಟ್ಟಿರಲಿಲ್ಲ. ಪ್ರಥಮದಲ್ಲಿ ದಿ. ಶ್ರೀ ಗುರುರಾಜ ರಾವ್ ಎನ್ನುವವರು ನಮ್ಮ ವಕೀಲರಾಗಿದ್ದರು. ಪ್ರಸಕ್ತ ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ಮತ್ತು ಅರ್ಜಿಯನ್ನು ಡ್ರಾಪ್ಟ್ ಮಾಡಲು ಮಾಹಿತಿ ನೀಡುವ ಕಾಲಕ್ಕೆ ಪಿ. ಶೇಷಾರೆಡ್ಡಿ ಇವರು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಹ ಮುಂದುವರೆದು ನಾನು ಮತ್ತು ಪಿ. ಶೇಷಾರೆಡ್ಡಿ ಇವರು ಇಬ್ಬರು ಹಾಜರಿದ್ದು ಎರಡು ಜನ ಒಟ್ಟಿಗೆ ಮಾಹಿತಿ ನೀಡಿರುತ್ತೇವೆ ಎಂದು ಹೇಳುತ್ತಾರೆ. ಅರ್ಜಿಗೆ (ದಾವೆಗೆ) ನಾನು ಸಹಿ ಹಾಕಿರುತ್ತೇನೆ. ಅದಕ್ಕೆ ಪಿ. ಶೇಷಾರೆಡ್ಡಿ ರವರು ಸಹಿ ಹಾಕಿರುವುದಿಲ್ಲ. ಸದರಿ ಅರ್ಜಿಗೆ (ದಾವೆಗೆ) ಸಹಿ ಹಾಕಲು ನನಗೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸಿದ ನಂತರ ಎದುರುದಾರರು ಸಲ್ಲಿಸಿರುವ ತಕರಾರನ್ನು ನಾನು ನೋಡಿರುತ್ತೇನೆ ಮತ್ತು ತಿಳಿದುಕೊಂಡಿರುತ್ತೇನೆ. 1987 ರಲ್ಲಿ ಪಿ. ಶೇಷಾರೆಡ್ಡಿ ಇವರು ಈ ಪ್ರರಣದಲ್ಲಿ ನಮೂದಿಸಿರುವಕಾಮಗಾರಿಗೆ ಸಂಬಂದಿಸಿದಂನತೆ Sr. Civil Judge, Yadgir ನಲ್ಲಿ ಅಸಲು ದಾವಾ ನಂಬರ 54/1987 ನ್ನು ಸಲ್ಲಿಸಿದರು ಎಂದರೆ ಸಾಕ್ಷಿಯು ಈ ಪ್ರಕರಣದಲ್ಲಿನ ಕಾಮಗಾರಿಗೆ ಸಂಬಂಧಿಸಿದಂತೆ ಆ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದು ಹೇಳುತ್ತಾರೆ. ಪಿ. ಶೇಷಾರೆಡ್ಡಿ ಇವರು ಸಲ್ಲಿಸಿದ

ಅಸಲು ದಾವಾ ನಂಬರ 54/1987 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಸಲು ದಾವಾ ನಂಬರ 54/1987 ನ್ನು ಶೋರಾಪೂರ Sr. Civil Judge Court ಗೇ ವರ್ಗಾವಣೆಗೊಂಡು ಅಲ್ಲಿ ಅಸಲು ದಾವಾ ನಂಬರ 117/1989 ಎಂದು ಮರು ಸಂಖ್ಯೆ ನೀಡಿ ದಾಖಲಾಗಿತ್ತು ಎಂದರೆ ಸಾಕ್ಷಿಯು ಅದು ಅಲ್ಲಿಗೆ ವರ್ಗಾವಣೆ ಆಗಿದ್ದು ಮತ್ತು ಅದು ವಜಾಗೊಂಡಿರುತ್ತದೆ ಎಂದು ಹೇಳುತ್ತಾರೆ. ಆ ದಾವೆಯಲ್ಲಿ ಪಿ. ಶೇಷಾರೆಡ್ಡಿ ಇವರು ನಾನು ಈ ಪ್ರಕರಣದಲ್ಲಿ ನಮೂದಿಸಿರುವ ಕಾಮಗಾರಿಗೆ ಸಂಬಂಧಿಸಿದಂತೆ Extra and Excess ಕೆಲಸ ಮಾಡಿರುವುದಕ್ಕೆ Extra amount ಕೇಳಿದ್ದರು ಎಂದರೆ ಸರಿ. ಸದರಿ ಕಾಮಗಾರಿಯ measurement ಮಾಡಿ ಕಾಮಗಾರಿ close ಮಾಡಿ ಹಣ ಪಾವತಿಸುವಂತೆ ಕೇಳಿದ್ದ ಎಂದರೆ ಸರಿಯಲ್ಲ.

ಸದರಿ ದಾವೆಯಲ್ಲಿ ಪಿ. ಶೇಷಾರೆಡ್ಡಿ ಇವರು ಈ ಕೆಳಕಂಡ 3 ಮತ್ತು 4 ನೇ relief

3. A declaration be made that the plaintiff has not liable and bound to pay the liquidated damages as claimed in the notice dated 23.2.1985 bearing No.UKP/SBC/GP/PB.3/84-85/10009-12 issued by the 2nd deft.

4. The defendants be restrained permanently for recovering the liquidated damages of Rs.1,856/- per day from 1.12.1983 and from forfeiting the Performance bod and the Deposit and Assets of the Plaintiff in the hands of the defendants.

ಎಂದು ಕೇಳಿದ್ದರು ಎಂದರೆ ಸಾಕ್ಷಿಯು ಆ reliefs ಗಳು ಪಿ. ಶೇಷಾರೆಡ್ಡಿ ಇವರು ಮಾಡಿರುವ ಕಾಮಗಾರಿಗೆ ಸಂಬಂದಪಟ್ಟಂತೆ ಇದ್ದವು. ನಾನು ಮಾಡಿರುವ ಕಾಮಗಾರಿಗೆ ಸಂಬಂದಪಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಅಸಲು ದಾವಾ ನಂಬ್ರ 117/1989 ದಿಃ 07.11.1989 ರಂದು ವಜಾಗೊಂಡಿರುವ ಅದೇಶದ ವಿರುದ್ದ ನಿವಾಗಲೀ ಅಥವಾ ಪಿ. ಶೇಷಾರೆಡ್ಡಿ ಆಗಲೀ ಮೇಲ್ಮನವಿ ಸಲ್ಲಿಸಿದೀರಾ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಅಸಲು ದಾವಾ ನಂಬ್ರ 117/1989 ವಜಾಗೊಂಡ ನಂತರ ಯಾವುದೆ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಸಲು ದಾವಾ ನಂಬರ 117/1989 ವಜಾಗೊಂಡಿರುವ ಕಾರಣ ಪ್ರಸಕ್ತ ಪ್ರಕರಣ Maintain ಆಗುವುದಿಲ್ಲ ಎಂದರೆ ಸರಿಯಲ್ಲ. 1984 ರಲ್ಲಿ ನಾನು ಕರ್ನಾಟಕ ಸರ್ಕಾರ ಬಳಿ Settlement ಮಾಡುವಂತೆ ಕೋರಿದ್ದೆ ಎಂದರೆ ಸರಿ. ನನ್ನ ಕೋರಿಕೆಯ ಮೇಲೆ

ಕರ್ನಾಟಕ ಸರ್ಕಾರದವರು ದಿಃ 30-03-1984 ರಂದು ಒಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಕಾಲಾವಕಾಶವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.